



ಏನೇನೋ ಶಬ್ದ ಹೊರಡಿಸಿದ. ಕೊಳಲು ವಾದಕ ಹೇಗೆ ಊದಬೇಕೆಂದು ತೋರಿಸಿಕೊಟ್ಟ. ಹುಡುಗ ಮತ್ತೆ ಪ್ರಯತ್ನಪಟ್ಟಾಗ ತಕ್ಕಮಟ್ಟಿಗೆ ಕುಹೂ ಶಬ್ದ ಹೊರಟಿತು. ಥಟ್ಟನೆ ಕೋಗಿಲೆ ಕೂಗಿ ಉತ್ತರ ಕೊಟ್ಟಿತು. ಹುಡುಗ ಮತ್ತೆ ನುಡಿಸಿದ. ಕೋಗಿಲೆ ಮತ್ತೆ ಉತ್ತರ ಕೊಟ್ಟಿತು.

ಮಕ್ಕಳಿಗೆಲ್ಲ ಸಂಭ್ರಮವಾಯಿತು. 'ನಾನು ಊದ್ತೀನಿ... ನಾನು ಊದ್ತೀನಿ' ಎಂದು ಮೇಲೆ ಬಿದ್ದರು.

ಕೊಳಲು ವಾದಕ ತನ್ನ ಜೋಳಿಗೆಯಲ್ಲಿದ್ದ ಕೊಳಲುಗಳನ್ನು ಹೊರತೆಗೆದ. 'ಇಗೋ ಕೊಳಲುಗಳು. ಯಾರು ಬೇಕಾದ್ರೂ ತಗಂಡು ಊದಬಹುದು. ಹತ್ತು ರೂಪಾಯಿಗೆ ಒಂದು!' ಎಂದ.

ಮಕ್ಕಳು ಪಾಕೆಟ್ ಮನಿ ಹೊರತೆಗೆದರು. ಕೆಲವರು ಮನೆಗೆ ಓಡಿ ಹೋಗಿ ದುಡ್ಡು ಇಸಿದುಕೊಂಡು ಬಂದರು. ನೋಡು ನೋಡುತ್ತಿದ್ದಂತೆಯೇ ಹದಿನೈದು ಇಪ್ಪತ್ತು ಕೊಳಲುಗಳು ಮಾರಾಟವಾದವು. ಕೊಳಲು ವಾದಕ 'ಕುಹೂ ಕುಹೂ' ಎಂದು ನುಡಿಸುತ್ತಾ ಮುಂದಕ್ಕೆ ಹೊರಟ. ಕೋಗಿಲೆ ಕೂಡ ಅದಕ್ಕೆ ಉತ್ತರ ಕೊಡುತ್ತಾ ಮರದಿಂದ ಮರಕ್ಕೆ ಹಾರುತ್ತಾ ಅವನನ್ನೇ ಅನುಸರಿಸಿತು. ಮಕ್ಕಳ ಗುಂಪು ಕೊಳಲು ನುಡಿಸುತ್ತಾ ಅವನ ಹಿಂದೆಯೇ ಹೋಯಿತು. ಒಂದು ಕ್ಷಣದಲ್ಲಿ ಇಡೀ ಬೀದಿಯೇ ಕುಹೂ ಉತ್ತರ ಪ್ರತ್ಯುತ್ತರದಿಂದ ತುಂಬಿಹೋಯಿತು. ಎಲ್ಲ ಮಕ್ಕಳೂ ತಾವು ನುಡಿಸಿದ ಶಬ್ದಕ್ಕೇ ಕೋಗಿಲೆ ಉತ್ತರ ಕೊಡುತ್ತಿದೆ ಎಂದು ಸಂಭ್ರಮಿಸಿದರು. ಭ್ರಮಿಸಿದರು.

ಬೀದಿಯ ಕೊನೆಗೆ ಹೋಗುತ್ತಿದ್ದಂತೆಯೇ ಕೊಳಲು ವಾದಕ ಏನೋ ವಿಚಿತ್ರ ಧ್ವನಿ ಹೊರಡಿಸಿದ. ಕೋಗಿಲೆ ಹಾರಿ ಬಂದು ಅವನ ಭುಜದ ಮೇಲೆ ಕುಳಿತು ಕೊಂಡಿತು. 'ಚಲ್ ಮೇರೆ ಬೇಟಾ... ಮುಂದಿನ ಬೀದಿಗೆ ಹೋಗಿ ಇನ್ನಷ್ಟು ಕೊಳಲು ಮಾರೋಣ' ಎಂದು ಅವನು ಹೆಜ್ಜೆ ಹಾಕಿದ.

ಮಕ್ಕಳೆಲ್ಲ ಬೆರಗಾಗಿ ಅವನನ್ನೇ ನೋಡುತ್ತಿದ್ದರು.

## ಈಶ್ವರಚಂದ್ರ

ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಹೋದಿಗೆರೆಯವರು. ಬೆಂಗಳೂರಿನ 'ವಿಮಾನ ಸಂಶೋಧನೆ ಮತ್ತು ವಿನ್ಯಾಸ' ಕೇಂದ್ರದಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಕಥಾಸಂಗಮ' ಸಿನಿಮಾದ ಮೂರು ಕತೆಗಳಲ್ಲಿ ಇವರ 'ಮುನಿತಾಯಿ' ಕತೆಯೂ ಒಂದು. ಅವರ 'ಹಬ್ಬಿದಾಮಲೆ ಮಧ್ಯದೊಳಗೆ' ಕತೆ 'ಕಾಡಿಗೆ ಹೋದವರು' ಎಂಬ ಹೆಸರಿನ ಸಿನಿಮಾ ಆಗಿದೆ. 'ರಾತ್ರಿರಾಣಿ', 'ತೀರ', 'ಗುಂಪಿನಲ್ಲಿ ಕಂಡ ಮುಖ', 'ಮುನಿತಾಯಿ', 'ಕತ್ತಲಗರ್ಭ', 'ಅದ್ವಿತೀಯ' ಅವರ ಕಥಾಸಂಗ್ರಹಗಳು. 'ಒಂದೇ ಸೂರಿನ ಕೆಳಗೆ', 'ಸಿಮೆಂಟ್ ಮನುಷ್ಯರು' ಅವರ ಕಿರು ಕಾದಂಬರಿಗಳು.